# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 649 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 24-09-2020 |
| 4 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸಿ ಎ ಜಿ ವರದಿಯಲ್ಲಿ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸೈಬರ್ ವಿಭಾಗದ ವರದಿ ನೀಡುವ ಅಧಿಕಾರಿಗಳು ಅರ್ಹ ವಿದ್ಯಾಭ್ಯಾಸವನ್ನು ಹೊಂದಿಲ್ಲ ಎಂಬುದಾಗಿ ವರದಿ ನಿಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅರ್ಹ ವಿದ್ಯಾರ್ಹತೆಯನ್ನು ಹೊಂದಿರದ ಈ ನೌಕರರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಕಂಪ್ಯೂಟರ್ ಫೊರೆನ್ಸಿಕ್ ವಿಭಾಗ, ಮೊಬೈಲ್ ಪಾರೆನ್ಸಿಕ್ ವಿಭಾಗ ಹಾಗೂ ಅಡಿಯೋ ವಿಡಿಯೋ ವಿಭಾಗಕ್ಕೆ ಸರ್ಕಾರದಿಂದ ದಿನಾಂಕ: 31.07.2015 ರಲ್ಲಿ ಒಟ್ಟು 3 ಸಹಾಯಕ ನಿರ್ದೇಶಕರು, 12 ಹಿರಿಯ ವೈಜ್ಞಾನಿಕ ಅಧಿಕಾರಿಗಳು ಹಾಗೂ 30 ವೈಜ್ಞಾನಿಕ ಅಧಿಕಾರಿಗಳ ಹುದ್ದೆ ಮಂಜೂರು ಮಾಡಲಾಗಿರುತ್ತದೆ.<br>ಕಂಪ್ಯೂಟರ್ ಪೊರೆನ್ಸಿಕ್ ವಿಭಾಗ(ಸೈಬರ್), ಮೊಬೈಲ್ ಪೊರೆನ್ಸಿಕ್ ವಿಭಾಗ ಹಾಗೂ ಅಡಿಯೋ ವಿಡಿಯೋ ವಿಭಾಗಕ್ಕೆ ಪ್ರಾರಂಭದ ಹಂತದಲ್ಲಿ ಸಿಬ್ಬಂದಿಗಳ ನೇಮಕಾತಿ ಆಗದೇ ಇರುವುದರಿಂದ ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕದಲ್ಲಿ ಇತರೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳಿಗೆ 3 ತಿಂಗಳ ಅವಧಿಗೆ ಕೇರಳದ C-DAC ನಲ್ಲಿ ತರಬೇತಿ ನೀಡಿ, ಓ.ಓ.ಡಿ ಆಧಾರದ ಮೇಲೆ ಸಹಾಯಕ ನಿರ್ದೇಶಕರವರ ಅಧೀನದಲ್ಲಿ ಕರ್ತವ್ಯ ನಿರ್ವಹಿಸಲು ನಿಯೋಜಿಸಲಾಗಿರುತ್ತದೆ.<br>ಕಂಪ್ಯೂಟರ್ ಪಾರೆನ್ಸಿಕ್ ವಿಭಾಗ, ಮೊಬೈಲ್ ಪಾರೆನ್ಸಿಕ್ ವಿಭಾಗ ಹಾಗೂ ಅಡಿಯೋ ವಿಡಿಯೋ ವಿಭಾಗಕ್ಕೆ ನಿಯೋಜಿಸಲಾಗಿರುವ ವೈಜ್ಞಾನಿಕ ಅಧಿಕಾರಿಗಳು 4 ವರ್ಷಗಳ ಅವಧಿಯಲ್ಲಿ ಒಟ್ಟು 800ಕ್ಕಿಂತ ಹೆಚ್ಚು ವಿವಿಧ ರೀತಿಯ ಪ್ರಕರಣಗಳನ್ನು ವಿಶ್ಲೇಷಣೆ ಮಾಡಿ ಸಹಾಯಕ ನಿರ್ದೇಶಕರವರಿಗೆ ವರದಿ ನೀಡಲು ಸಹಕರಿಸಿರುತ್ತಾರೆ. ಸೈಬರ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ನಿರ್ದೇಶಕರವರು ಸೈಬರ್ ವಿಭಾಗಕ್ಕೆ ಅಗತ್ಯವಿರುವ ಸಮಾನಾಂತರ ವಿದ್ಯಾರ್ಹತೆಯನ್ನು ಹೊಂದಿರುತ್ತಾರೆ. ಸ್ಥಾಯಿ ಆದೇಶ 1022 ಪ್ರಕಾರ ಅರ್ಹ ವಿದ್ಯಾರ್ಹತೆ ಪಡೆದ ನಂತರ ಸದರಿ ರವರಿಗೆ ಸ್ವತಂತ್ರವಾಗಿ ವರದಿ ನೀಡಲು ಅಧಿಕಾರ ನೀಡಲಾಗಿರುತ್ತದೆ.<br>ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕಕ್ಕೆ ಈಗಾಗಲೇ NABL Accreditation ಮಾನ್ಯತೆ 2018 ದೊರೆತಿದ್ದು, ಸೈಬರ್ ವಿಭಾಗಕ್ಕೆ ಕೇಂದ್ರ ಸರ್ಕಾರದ Examiner of Electronic Evidence ಮಾನ್ಯತೆ ದಿನಾಂಕ:-04.09.2018ರಲ್ಲಿ ದೊರೆತಿದ್ದು, NABL ಅಧಿಕಾರಿಗಳು ಹಾಗೂ Examiner of Electronic Evidence(EEE)ಅಧಿಕಾರಿಗಳು ಯಾವುದೇ ಪ್ರತಿಕೂಲ ಷರಾ ಮಾಡಿರುವುದಿಲ್ಲ. |

| | | |
|---|---|---|
| ಆ) | ಅರ್ಹ ವಿದ್ಯಾರ್ಹತೆ ಪಡೆಯದೆ ಕೇವಲ 3 ತಿಂಗಳ ತರಬೇತಿ ಪಡೆದಿರುವ ಯಾವುದೇ ವ್ಯಕ್ತಿಯು ಸೈಬರ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಅರ್ಹರೆ; ಹಾಗಿದ್ದಲ್ಲಿ, ನೇಮಕ ಪ್ರಕ್ರಿಯೆ ಸಂದರ್ಭದಲ್ಲಿ ಅರ್ಹ ವಿದ್ಯಾಭ್ಯಾಸದ ಕುರಿತು ಮಾಹಿತಿ ಪಡೆಯುವ ಅವಶ್ಯಕತೆ ಇದೆಯೇ; ಯಾವುದೇ ಅರ್ಹತೆ ಇಲ್ಲದ ವ್ಯಕ್ತಿಯನ್ನು ನೇಮಕ ಮಾಡಿ ಆ ಬಳಿಕ 3 ತಿಂಗಳ ತರಬೇತಿ ನೀಡಿದ್ದಲ್ಲಿ ಎಂ.ಎಸ್.ಸಿ. ಕಂಪ್ಯೂಟರ್ ಸೈನ್ಸ್ ಪದವಿಗೆ ಸರಿಸಮ ಎಂದಂತಾಗಲಿಲ್ಲವೇ; ಈ ಕುರಿತು ಸರ್ಕಾರದ ನಿಲುವೇನು; | ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕದಲ್ಲಿ ಸೈಬರ್ ವಿಭಾಗವು ಪ್ರಾರಂಭವಾದ ಹಂತದಲ್ಲಿ ಸಿಬ್ಬಂದಿಗಳ ಲಭ್ಯತೆ ಇಲ್ಲದ್ದರಿಂದ, ಆಸಕ್ತಿಯುಳ್ಳ ವೈಜ್ಞಾನಿಕ ಅಧಿಕಾರಿರವರನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಿ, 3 ತಿಂಗಳ ತರಬೇತಿಯನ್ನು C-DAC ತಿರುವನಂತಪುರಂನಲ್ಲಿ ನೀಡಿ, ನಂತರದಲ್ಲಿ ಸೈಬರ್ ವಿಭಾಗದಲ್ಲಿನ ಪ್ರಕರಣಗಳನ್ನು ವಿಶ್ಲೇಷಣೆ ಮಾಡಲು ಅನುಮತಿಸಲಾಗಿರುತ್ತದೆ, ವೈಜ್ಞಾನಿಕ ಅಧಿಕಾರಿಗಳು ಸೈಬರ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಲು ಅಗತ್ಯವಿರುವ ಸಮಾನಾಂತರ ವಿದ್ಯಾರ್ಹತೆಯನ್ನು ಹೊಂದಿರುವುದರಿಂದ, ವರದಿ ನೀಡಲು ಅನುಮತಿಸಲಾಗಿರುತ್ತದೆ.<br>ನ್ಯಾಯ ವಿಜ್ಞಾನ ಪ್ರಯೋಗಾಲಯದ ಸೈಬರ್ ವಿಭಾಗದಲ್ಲಿ ವೈಜ್ಞಾನಿಕ ಅಧಿಕಾರಿಗಳು ಓಓಡಿ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಅಧಿಕಾರಿಗಳು C-DAC ತಿರುವನಂತಪುರಂನಲ್ಲಿ ತರಬೇತಿ ಪಡೆದಿರುವುದರಿಂದ, ಸೈಬರ್ ವಿಭಾಗದಲ್ಲಿನ ಪ್ರಕರಣಗಳನ್ನು ವಿಶ್ಲೇಷಣೆ ಮಾಡಲು ಅರ್ಹ ವಿದ್ಯಾರ್ಹತೆ ಪಡೆದ ಮೇಲೆ ವರದಿಗಳಿಗೆ ಸಹಿ ಮಾಡಲು ಅಧಿಕಾರ ನೀಡಲಾಗಿರುತ್ತದೆ. |
| ಇ) | ಸಿಬ್ಬಂದಿಗಳ ಕೊರತೆಯ ನೆಪವೊಡ್ಡಿ ಅನರ್ಹರನ್ನು ಸೈಬರ್ ವಿಭಾಗಕ್ಕೆ ನೇಮಕ ಮಾಡಿ 3 ತಿಂಗಳ ತರಬೇತಿ ನೀಡಲಾಗಿದೆ ಎಂದರೆ ಸೈಬರ್ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರು ನೇಮಕಾತಿ ಸಂದರ್ಭದಲ್ಲಿ ಅರ್ಹ ವಿದ್ಯಾಭ್ಯಾಸ ಹೊಂದಿಲ್ಲ ಎಂಬುದನ್ನು ಒಪ್ಪಿಕೊಂಡಂತಾಗಿದ್ದು, ಈ ರೀತಿಯಾಗಿ ಅನರ್ಹರನ್ನು ನೇಮಕ ಮಾಡಿದವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ; | |
| ಈ) | 14.12.2018ರ ಪ್ರಶ್ನೆ ಸಂಖ್ಯೆ: 695 ಮತ್ತು 19.07.2019ರ ಪ್ರಶ್ನೆ ಸಂಖ್ಯೆ;215ಕ್ಕೆ ನೀಡಿರುವ ಉತ್ತರದಲ್ಲೂ ಸ್ಪಷ್ಟವಾಗಿ ಸಿಬ್ಬಂದಿಗಳು ಅರ್ಹ ವಿದ್ಯಾಭ್ಯಾಸ ಹೊಂದಿಲ್ಲ ಎಂಬುದಾಗಿ ಸದನಕ್ಕೆ ಲಿಖಿತ ಉತ್ತರ ನೀಡಿದ್ದು, ಇಲಾಖೆ ಅನರ್ಹರಿಂದಲೇ ಕ್ರೈಂ ಕುರಿತು ವಿಶ್ಲೇಷಣೆಗಳನ್ನು ನಡೆಸುತ್ತಿರುವುದಾಗಿ ಸ್ಪಷ್ಟವಾಗಿ ಲಿಖಿತ ಹೇಳಿಕೆ ನೀಡಿರುವುದು ಗಂಭಿರ ವಿಷಯವಾಗಿದ್ದು, ಈ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ? | ಸೈಬರ್ ವಿಭಾಗಕ್ಕೆ ಪ್ರಾರಂಭಿಕ ಹಂತದಲ್ಲಿ ಸಿಬ್ಬಂದಿಗಳು ನೇಮಕಾತಿಯಾಗದಿರುವುದರಿಂದ ಓ.ಓ.ಡಿ ಆಧಾರದ ಮೇಲೆ ಇತರೇ ವಿಭಾಗದ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿರುತ್ತದೆ.<br>ಸದರಿ ವಿಭಾಗಕ್ಕೆ ಸಹಾಯಕ ನಿರ್ದೇಶಕರು ಮತ್ತು ವೈಜ್ಞಾನಿಕ ಅಧಿಕಾರಿರವರು ಅರ್ಹ ವಿದ್ಯಾರ್ಹತೆ ಪಡೆದ ಮೇಲೆ ವರದಿಗಳಿಗೆ ಸಹಿ ಮಾಡುವ ಅಧಿಕಾರ ನೀಡಲಾಗಿರುತ್ತದೆ.<br>ಇದಲ್ಲದೇ 2019 ಸಾಲಿನಲ್ಲಿ ನೇರ ನೇಮಕಾತಿಯಲ್ಲಿ ಕಂಪ್ಯೂಟರ್ ಪಾರೆನ್ಸಿಕ್ ವಿಭಾಗ-1 ಹುದ್ದೆ, ಮೊಬೈಲ್ ಪಾರೆನ್ಸಿಕ್ ವಿಭಾಗ-1 ಹುದ್ದೆ ಹಾಗೂ ಅಡಿಯೋ ವಿಡಿಯೋ ವಿಭಾಗಕ್ಕೆ-1 ಹುದ್ದೆ ಆಯ್ಕೆಯಾಗಿರುತ್ತಾರೆ<br>2020 ನೇ ಸಾಲಿನಲ್ಲಿ ಕಂಪ್ಯೂಟರ್ ಪಾರೆನ್ಸಿಕ್ ವಿಭಾಗಕ್ಕೆ-4 ಹುದ್ದೆ, ಮೊಬೈಲ್ ಪಾರೆನ್ಸಿಕ್ ವಿಭಾಗದ-4 ಹುದ್ದೆ ಹಾಗೂ ಅಡಿಯೋ ವಿಡಿಯೋ ವಿಭಾಗದ-4 ಹುದ್ದೆಯನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದ್ದು, ನೇಮಕಾತಿ ಪ್ರಕಿಯೇ ಪ್ರಗತಿಯಲ್ಲಿದ್ದು, ಲಿಖಿತ ಪರೀಕ್ಷಾ ಹಂತದಲ್ಲಿರುತ್ತದೆ.<br>ನ್ಯಾಯ ವಿಜ್ಞಾನ ಪ್ರಯೋಗಾಲಯ ಘಟಕಕ್ಕೆ ಈಗಾಗಲೇ NABL Accreditation ದಿನಾಂಕ: 20.03.2019 ರಲ್ಲಿ ಮಾನ್ಯತೆ ದೊರೆತಿದ್ದು, ಸೈಬರ್ ವಿಭಾಗಕ್ಕೆ ಕೇಂದ್ರ ಸರ್ಕಾರದ Examiner of Electronic Evidence (EEE) ಮಾನ್ಯತೆ ದಿನಾಂಕ:-04.09.2018ರಲ್ಲಿ ದೊರೆತಿರುತ್ತದೆ. |

**ಸಂಖ್ಯೆ: ಒಇ 95 ಪಿಇಐ 2020**

**(ಬಸವರಾಜ ಬೊಮ್ಮಾಯಿ)**
ಗೃಹ ಸಚಿವರು